# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:– 01–10–2022 ರಂದು ಬೆಳಗ್ಗೆ:– 10.30 ಗಂಟೆಗೆ ಶ್ರೀ. ಶ್ರೀ. ಶ್ರೀ ಶಿವಕುಮಾರ ಸ್ವಾಮೀಜಿ ಸಾರ್ವಜನಿಕ ಸೇವಾ ಸಂಕೀರ್ಣ ವಾರ್ಡ್ ಸಂಖ್ಯೆ 126 ಮಾರುತಿಮಂದಿರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:–

| Sl.No | Name | Ph.No | Present / Absent |
|---|---|---|---|
| 1 | **Nodal Officer:= Prakash K.S EE Govindarajnagara Division** | 9845494728 | Present |
| 2 | Sathish Kumar .B AE 126 (Incharge) BBMP | 9880294721 | Present |
| 3 | Krishnoji Rao .S Vijaykumar – Vijaynagara Traffice A.S.I | 9900194105 | Present |
| 4 | Thimmappa B – Revenue Inspector | 9972809545 | Present |
| 5 | Ramesh R Junior Health Inspector | 9206687122 | Present |
| 6 | Santhosh H M – Supervisor | 9986863270 | Present |
| 7 | Manjunath - Street Light | 7022988706 | |
| 8 | Mamatha , J.E BESCOM | 9449869245 | Present |
| 9 | Santhosh T A.E - BWSSB | 7892580073 | |
| 10 | Suresh Forest Department BBMP | 8073299107 | Present |

ಸಭೆಗೆ ಹಾಜರಿದ್ದ ಸದಸ್ಯರುಗಳು:–

| Sl.No | Name | Ph.No | Present / Absent |
|---|---|---|---|
| 1 | V. Vagish Ex BBMP Member | 9845165479 | Present |
| 2 | C Shivalingam – vinayaka layout | 9916243736 | Present |
| 3 | Vinay Lakkanna – canara bank colony | 9663379951 | Present |
| 4 | B. Shantharam – PF Layout | - | Present |

ದಿನಾಂಕ. 01–10–2022ರಂದು ಬೆಳಿಗ್ಗೆ 10–30 ಗಂಟೆಗೆ **ಚರ್ಚಿಸಲಾದ ವಿಷಯಗಳ ವಿವರಗಳು:–**

ನೋಡೆಲ್ ಅಧಿಕಾರಿ ಶ್ರೀ ಪ್ರಕಾಶ್ ಕೆ.ಎಸ್ ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ರವರು ಎಲ್ಲರಿಗೂ ವಂದಿಸುತ್ತಾ, ಸಭೆಯನ್ನು ಆರಂಭಿಸಿದರು.

1. ಕೆನರಾ ಬ್ಯಾಂಕ್ ಕಾಲೋನಿ ಮುಖ್ಯರಸ್ತೆಯಲ್ಲಿರುವ ಗುಂಡಿಗಳನ್ನು ಡಾಂಬರೀಕರಣಗೊಳಿಸಲಾಗಿರುತ್ತದೆ ಬಡಾವಣೆಯ ಒಳಗಿನ ರಸ್ತೆಗಳಲ್ಲಿ ಕೆಲವು ಗುಂಡಿಗಳಿದ್ದು, ಈಗ ಅಮೃತ್ ನಗರೋತ್ಥಾನ ಯೋಜನೆಯಡಿಯಲ್ಲಿ ಬಡಾವಣೆಯ ರಸ್ತೆಗಳನ್ನು ಡಾಂಬರೀಕರಣ ಗೊಳಿಸಲಾಗುವುದು ಎಂದು ನೋಡೆಲ್ ಅಧಿಕಾರಿಗಳು ತಿಳಿಸಿದರು.
2. ವಾರ್ಡ್ ಕಛೇರಿಯ ರಸ್ತೆಯ ಡಾಂಬರೀಕರಣದ ಬಗ್ಗೆ ಸದಸ್ಯರು ವಿಚಾರಿಸಿದಾಗ ರಸ್ತೆ ಮೂಲಭೂತ ಸೌಕರ್ಯ ವಿಭಾಗದಿಂದ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ನೋಡೆಲ್ ಅಧಿಕಾರಿಗಳು ತಿಳಿಸಿದರು.

3. ಪೌರಕಾರ್ಮಿಕರು ಹಾಗೂ ಮೇಲ್ವಿಚಾರಕರುಗಳ ವಿವರಗಳನ್ನು ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಒದಗಿಸಿರುತ್ತಾರೆ. ಆರ್.ಡಬ್ಲ್ಯೂ.ಎ ಸದಸ್ಯರುಗಳಿಗೆ ಅವರ ಬಡಾವಣೆಯ ರಸ್ತೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ವಿವರಗಳನ್ನು ಒದಗಿಸುವಂತೆ ನೋಡೆಲ್ ಅಧಿಕಾರಿಗಳು ಸೂಚಿಸಿದರು.
4. ಬಡಾವಣೆಗಳಲ್ಲಿ ತೆರವುಗೊಳಿಸಬೇಕಾಗಿರುವ ಡೆಬ್ರಿಸ್ ಸ್ಥಳಗಳ ಪಟ್ಟಿಯನ್ನು ಒದಗಿಸುವಂತೆ ಆರ್.ಡಬ್ಲ್ಯೂ.ಎ ಸದಸ್ಯರುಗಳಿಗೆ ಸೂಚಿಸಲಾಯಿತು.
5. ಬಿಡಾಡಿ ವಾಹನಗಳ (Abandoned vehicles) ಬಗ್ಗೆ ಟ್ರಾಫಿಕ್ ಪೋಲೀಸ್ ಸಿಬ್ಬಂದಿಯನ್ನು ನೋಡೆಲ್ ಅಧಿಕಾರಿಗಳು ಕೇಳಿದಾಗ ದಂಡ ಹಾಕಲಾಗುವುದೆಂದು ಪೋಲೀಸ್ ಸಿಬ್ಬಂದಿ ತಿಳಿಸಿರುತ್ತಾರೆ. ಟೋಯಿಂಗ್‌ನ್ನು ರದ್ದುಪಡಿಸಲಾಗಿದ್ದು, Public Eye ಎಂಬ ಆ್ಯಪ್ ನ್ನು ಪ್ಲೇ ಸ್ಟೋರ್ ನಿಂದ ಡೌನ್‌ಲೋಡ್ ಮಾಡಿಕೊಂಡು ಸಾರ್ವಜನಿಕರು ಕೂಡ ಯಾವುದೇ ಟ್ರಾಫಿಕ್ Violation ಗಳನ್ನು ಫೋಟೋ ಹಿಡಿದು ದೂರು ದಾಖಲು ಮಾಡಬಹುದಾಗಿರುತ್ತದೆ ಎಂದು ಪೋಲೀಸ್ ಸಿಬ್ಬಂದಿ ತಿಳಿಸಿರುತ್ತಾರೆ.
6. ಕೆನರಾ ಬ್ಯಾಂಕ್ ಕಾಲೋನಿ 9ನೇ ಮುಖ್ಯರಸ್ತೆಯಲ್ಲಿ ಮರ ಕತ್ತರಿಸಲು ಕ್ರೇನ್ ನ ಅವಶ್ಯಕತೆ ಇದ್ದು, ಬೆಸ್ಕಾಂ ರವರಿಗೆ ಕ್ರೇನ್ ಒದಗಿಸಲು ನೋಡೆಲ್ ಅಧಿಕಾರಿಗಳು ಸೂಚಿಸಿದರು.
7. ಮ್ಯಾನ್ ಹೋಲ್, ಚೆಂಬರ್‌ಗಳನ್ನು ರಸ್ತೆಯ Surface ನೊಂದಿಗೆ ಹೊಂದುವಂತೆ ಎತ್ತರಿಸಲು ಬಿಡಬ್ಲ್ಯೂಎಸ್ಎಸ್‌ಬಿ ಸಿಬ್ಬಂದಿಗೆ ಸೂಚಿಸಲಾಯಿತು.
8. BWSSB Leakage ಗಳಿಗಾಗಿ ಅಗೆದ ಜಾಗಗಳನ್ನು ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದಲೇ Restore ಮಾಡಬೇಕೆಂದು ನೋಡೆಲ್ ಅಧಿಕಾರಿಗಳು ಸೂಚಿಸಿರುತ್ತಾರೆ.
9. ಜಿ.ಕೆ.ಡಬ್ಲ್ಯೂ ಬಡಾವಣೆಯ 4ನೇ ಅಡ್ಡರಸ್ತೆಯಲ್ಲಿ ಕಾಂಕ್ರೀಟ್ ಚರಂಡಿ ನಿರ್ಮಿಸಬೇಕೆಂದು ಪಾಲಿಕೆ ಸದಸ್ಯರಾದ ಶ್ರೀ ವಿ.ವಾಗೀಶ್‌ರವರು ತಿಳಿಸಿರುತ್ತಾರೆ.
10. ಸರ್ವಿಸ್ ರಸ್ತೆಯಲ್ಲಿ ಕರ್ಬ್‌ಗಳನ್ನು ನಿಲ್ಲಿಸಬಾರದು ಅದನ್ನು ರಸ್ತೆಗೆ ಸಮನಾಂತರವಾಗಿ ಅಳವಡಿಸಿದಲ್ಲಿ ರಸ್ತೆಯ ಮೇಲೆ ನಿಲ್ಲಿಸುತ್ತಿರುವ ದ್ವಿಚಕ್ರ ವಾಹನಗಳನ್ನು ಮೋರಿಯ ಮೇಲೆ ನಿಲ್ಲಿಸುವುದರಿಂದ ರಸ್ತೆಯ ಜಾಗವು ವಾಹನ ಸಂಚಾರಕ್ಕೆ ಲಭ್ಯವಾಗಿ ಟ್ರಾಫಿಕ್ ಜಾಮ್ ಆಗುವುದು ತಪ್ಪುತ್ತದೆ. ಎಂದು ಮಾಜಿ ಪಾಲಿಕೆ ಸದಸ್ಯರು ಸಭೆಯಲ್ಲಿ ತಿಳಿಸಿದರು.
11. ಪಾರ್ಕ್‌ಗಳಲ್ಲಿನ ಶೌಚಾಲಯಗಳನ್ನು ನೋಡಿಕೊಳ್ಳುವುದು ತೋಟದ ಮಾಲಿ ಹಾಗೂ ಭದ್ರತಾ ಸಿಬ್ಬಂದಿ ಈ ಮೂರು ಕೆಲಸ ನಿರ್ವಹಿಸಲು ಪ್ರತ್ಯೇಕ ಸಿಬ್ಬಂದಿ ನಿಯೋಜಿಸಬೇಕಾಗಿರುತ್ತದೆ. ಎಂದು ಮಾಜಿ ಸದಸ್ಯರು ತಿಳಿಸಿದರು ಹಾಗೂ ವಿನಾಯಕ ಬಡಾವಣೆಯ ಪಾರ್ಕ್‌ನ್ನು ಹೊರತುಪಡಿಸಿ ಇನ್ನುಳಿದ ಪಾರ್ಕ್‌ಗಳ ಶೌಚಾಲಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂದು ತಿಳಿಸಿರುತ್ತಾರೆ.
12. ಜಿಕೆಡಬ್ಲ್ಯೂ ಲೇಔಟ್ ಬಡಾವಣೆಯ ಉದ್ಯಾನವನದಲ್ಲಿ ತುರ್ತಾಗಿ ಕಾಮಗಾರಿ ಪ್ರಾರಂಭಿಸಲು ಕೋರಿರುತ್ತಾರೆ. ಕೆನರಾ ಬ್ಯಾಂಕ್ ಹಾಗೂ ವಿನಾಯಕ ಬಡಾವಣೆಯ ಉದ್ಯಾನವನಗಳಲ್ಲಿ F M Radio ಸರಿಪಡಿಸಲು ಕೋರಿರುತ್ತಾರೆ.

13. ಬೆಸ್ಕಾಂ ಗೆ ಸಂಬಂಧಿಸಿದ ದೂರುಗಳನ್ನು ವಾರ್ಡ್ ಕಛೇರಿ ಕಟ್ಟಡದಲ್ಲಿರುವ ಬೆಸ್ಕಾಂ ಸಿಬ್ಬಂದಿ ಸ್ವೀಕರಿಸಲು ನಿರಾಕರಿಸುತ್ತಿದ್ದು, ಇನ್ನು ಮುಂದೆ ಇದೇ ಕಛೇರಿಯಲ್ಲಿ ವಾರ್ಡ್ ಸಂಖ್ಯೆ 126 ರ ಬೆಸ್ಕಾಂ ದೂರುಗಳನ್ನು ಸ್ವೀಕರಿಸಲು ಸಿಬ್ಬಂದಿ ನಿಯೋಜಿಸಲು ಸೂಚಿಸಲಾಗಿರುತ್ತದೆ.
14. ಅನುಭವನಗರ ಅಸೋಸಿಯೇಷನ್, ಪೊಲೀಸ್ ಚೌಕಿ ಹಾಗೂ ಅಂಗನವಾಡಿ ಈ ಕಟ್ಟಡಗಳಿಗೆ ಒಂದೇ ವಿದ್ಯುತ್ ಮೀಟರ್ ಇದ್ದು, 3 ಕಟ್ಟಡಗಳಿಗೆ ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಬೇಕೆಂದು ಮಾಜಿ ಪಾಲಿಕೆ ಸದಸ್ಯರು ಸಭೆಯಲ್ಲಿ ತಿಳಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಂಖ್ಯೆ.151

ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ.151

ಪ್ರತಿಯನ್ನು:–

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.